2017 ಕ.ತೀ.ವ. 1801

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕೆ. ಸುಧೀಂದ್ರರಾವ್

## ಐಶ್ವರ್ಯ ಎಂ –ವಿರುದ್ಧ– ಕರ್ನಾಟಕ ರಾಜ್ಯ, (ಪ್ರಧಾನ ಕಾರ್ಯದರ್ಶಿಗಳಂದ ಪ್ರತಿನಿಧಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು) (ವೈದ್ಯಕೀಯ ಶಿಕ್ಷಣ) ಮತ್ತು ಇತರರು*

**ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.**

**NEET ಫಲಿತಾಂಶದ ಆಧಾರದ ಮೇಲೆ ಅರ್ಜಿದಾರರು COMED-K ಅಡಿಯಲ್ಲಿ ಅರ್ಜಿದಾರಳಿಗೆ BDS ವ್ಯಾಸಂಗಕ್ಕಾಗಿ ಪ್ರವೇಶವನ್ನು 4ನೇ ಎದುರುದಾರ–ಕಾಲೇಜಿನಲ್ಲಿ ಹಂಚಿಕೆಯಾದ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯಕ್ಕೆ ಅರ್ಜಿದಾರರ ದಾಖಲಾತಿಗಳನ್ನು ಅನುಮೋದನೆಗಾಗಿ ಕಳುಹಿಸಿದಾಗ NEET ಅಂಕಗಳು ಅರ್ಹತೆಯನ್ನು ಹೊಂದಿಲ್ಲವೆಂದು ಅನುಮೋದನೆಯನ್ನು ತಿರಸ್ಕರಿಸಿ ನೀಡಿದ ವ್ಯವಹರಣೆಯನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.**

**ಅರ್ಜಿದಾರಳು ಮೀಸಲಾತಿ ಪಂಗಡಕ್ಕೆ ಸೇರಿದ್ದು ರಾಜ್ಯ ಕೋಟಾದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು NEET ಪರೀಕ್ಷೆಯಲ್ಲಿ ನಿಗದಿತ ಅಂಕಗಳಾದ ಶೇಕಡಾ 40 ಮೀರಿ ಶೇಕಡಾ 40.40 ಅಂಕಗಳನ್ನು ಪಡೆದಿರುತ್ತಾಳೆ. ಈ ಕಾರಣದಿಂದ ವಿಶ್ವವಿದ್ಯಾನಿಲಯವು ಅನುಮೋದನೆಯನ್ನು ತಿರಸ್ಕರಿಸಿದ ಕ್ರಮ ಸರಿಯಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.**

* ರಿಟ್ ಅರ್ಜಿ ಸಂಖ್ಯೆ: 5818/2017 (ಶಿಕ್ಷಣ–ವೈದ್ಯಕೀಯ–ಆಡಳಿತ),
ದಿನಾಂಕ: 13ನೇ ಮಾರ್ಚ್, 2017.

ಅರ್ಜಿದಾರರ ಪರ : ಶ್ರೀ ಅಜೋಯ್ ಕುಮಾರ್ ಪಾಟೀಲ್, ವಕೀಲರು ;
1ನೇ ಪ್ರತ್ಯರ್ಜಿದಾರರ ಪರ : ಕು. ನಿಲೋಫರ್ ಅಕ್ಬರ್, ಎಜಿಎ,
2ನೇ ಪ್ರತ್ಯರ್ಜಿದಾರರ ಪರ : ಕು. ಪರ್ಹಾ ಫಾತಿಮಾ ಪರವಾಗಿ
ಕೆ. ಶಶಿ ಕಿರಣ್ ಶೆಟ್ಟಿ, ಹಿರಿಯ ನ್ಯಾಯವಾದಿಗಳು
3ನೇ ಪ್ರತ್ಯರ್ಜಿದಾರರ ಪರ : ಶ್ರೀ ಎನ್.ಕೆ. ರಮೇಶ್, ವಕೀಲರು,
4ನೇ ಪ್ರತ್ಯರ್ಜಿದಾರರ ಪರ : ಶ್ರೀ ಅಭಿಷೇಕ್ ಮಲಿಪಾಟೀಲ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್:**

ಅರ್ಜಿದಾರಳಿಗೆ, ಸಿಬಿಎಸ್ಇ ಮೂಲಕ ಘೋಷಿಸಿದ ನೀಟ್ – ಫಲಿತಾಂಶದ ಆಧಾರದ ಮೇಲೆ 2016–17ನೇ ಶೈಕ್ಷಣಿಕ ವರ್ಷಕ್ಕಾಗಿ, 4ನೇ ಪ್ರತ್ಯರ್ಜಿದಾರ – ಕಾಲೇಜಿನಲ್ಲಿ ಕಾಮೆಡ್–ಕೆ ಮೂಲಕ, ದಂತ ವೈದ್ಯಕೀಯ ವಿಜ್ಞಾನ ಪದವಿಗಾಗಿ (ಬಿಡಿಎಸ್) ಸೀಟು ಹಂಚಿಕೆ ಮಾಡಲಾಗಿದೆಯೆಂಬುದು ಈ ಪ್ರಕರಣದ ಸಂಕ್ಷಿಪ್ತ ಸಂಗತಿಗಳಿಂದ ಕಂಡುಬರುತ್ತದೆ. ಪ್ರವೇಶದ ತರುವಾಯ, ಅರ್ಜಿದಾರಳ ದಾಖಲಾತಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿರುವಾಗ ವಿಶ್ವವಿದ್ಯಾಲಯ, ಅರ್ಜಿದಾರಳು ಪಡೆದ ನೀಟ್ ಅಂಕಗಳು ಅರ್ಹವಾಗುವುದಿಲ್ಲವೆಂಬ ಕಾರಣದ ಮೇಲೆ ಪ್ರವೇಶಕ್ಕೆ ಅನುಮೋದನೆ ನೀಡಿಲ್ಲ ಮತ್ತು ಆ ಮಟ್ಟಿಗಿನ ಮಾಹಿತಿಯನ್ನು ವಿಶ್ವವಿದ್ಯಾಲಯದಿಂದ ಸಹ ಮಾಡಲಾಗಿದೆಯೆಂಬುದನ್ನು ತಿಳಿಸಲಾಗಿದೆ. ಈ ಸಂದರ್ಭಗಳ ಹಿನ್ನೆಲೆಯಲ್ಲಿ ಅರ್ಜಿದಾರಳು, ಈ ನ್ಯಾಯಾಲಯಕ್ಕೆ ಬಂದಿದ್ದಾಳೆ.

2. ಅರ್ಜಿದಾರಳ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಅಜಯ್ ಕುಮಾರ್ ಪಾಟೀಲ್, 1ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿ ಎಜಿಎ ಕು. ನೀಲೋಪರ್ ಅಕ್ಬರ್, 2ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ಹಿರಿಯ

ನ್ಯಾಯವಾದಿ ಶ್ರೀ ಕೆ. ಶಶಿಕಿರಣ್ ಶೆಟ್ಟಿ ಯವರೊಂದಿಗೆ, ಕು. ಪರ್ಹಾ ಫಾತಿಮಾ, 3ನೇ ಪ್ರತ್ಯರ್ಜಿದಾರ ವಿಶ್ವವಿದ್ಯಾಲಯದ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಎನ್.ಕೆ. ರಮೇಶ್ ಮತ್ತು 4ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಅಭಿಷೇಕ್ ಮಾಲಿಪಾಟೀಲ್ ಇವರ ಅಹವಾಲಗಳನ್ನು ನಾವು ಆಲಿಸಿದ್ದೇವೆ.

3. ಪ್ರಸ್ತುತ ಅರ್ಜಿಯಲ್ಲಿ ಪರಿಗಣಿಸಬಹುದಾದ ಏಕೈಕ ಅಂಶವೆಂದರೆ ಸದರಿ ಅರ್ಜಿದಾರಳು, ಬಿಡಿಎಸ್ ಕೋರ್ಸು ಪ್ರವೇಶಕ್ಕಾಗಿ ಕನಿಷ್ಠ ಅರ್ಹತಾ ಮಾನದಂಡಗಳನ್ನು ಪೂರೈಸಿದ್ದಾಳೆಯೇ ಅಥವಾ ಇಲ್ಲವೇ? ಎಂಬುದಾಗಿದೆ.

4. ವಿನಿಯಮದ ಅಗತ್ಯತೆಯ ಪ್ರಕಾರ, ಸಾಮಾನ್ಯ ಪ್ರವರ್ಗದ ಅಭ್ಯರ್ಥಿಯಾಗಿದ್ದಲ್ಲಿ, ನೀಟ್ ಪರೀಕ್ಷೆಯಲ್ಲಿ ಕನಿಷ್ಠ ಶೇಕಡಾ 50 ಅಂಕಗಳನ್ನು ಗಳಿಸಿರತಕ್ಕದ್ದು ಮತ್ತು ಮೀಸಲಿರಿಸಿದ ಪ್ರವರ್ಗದ ಅಭ್ಯರ್ಥಿಗಾಗಿ, ಎಸ್‌ಸಿ/ಎಸ್‌ಟಿ, ಇತರೇ ಹಿಂದುಳಿದ ವರ್ಗಗಳಿಗೆ ಸೇರಿದ, ಅಭ್ಯರ್ಥಿಯು, ನೀಟ್ ಪರೀಕ್ಷೆಯಲ್ಲಿ ಕನಿಷ್ಠ ಶೇಕಡಾ 40 ಅಂಕಗಳನ್ನು ಗಳಿಸುವುದು ಅಗತ್ಯವಾಗಿದೆಯೆಂಬುದನ್ನು ನಾವು ಪ್ರಥಮವಾಗಿ ದಾಖಲಿಸಿದ್ದೇವೆ.

5. ಇದಲ್ಲದೇ, ಬಿಡಿಎಸ್ ಕೋರ್ಸು ಪ್ರವೇಶಕ್ಕಾಗಿ, ಪ್ರಮುಖವಾಗಿ ಎರಡು ರೀತಿಗಳಿವೆ, ಸೀಟುಗಳ ಹಂಚಿಕೆಗಾಗಿ ಒಂದು, 'ಆಲ್ ಇಂಡಿಯಾ ಕೋಟಾ' ಮತ್ತು ಇನ್ನೊಂದು 'ರಾಜ್ಯ ಕೋಟಾ'ವಾಗಿದೆ. ನೀಟ್ ಫಲಿತಾಂಶವನ್ನು 'ಆಲ್ ಇಂಡಿಯಾ ಕೋಟಾ'ದಲ್ಲಿ ಶೇಕಡಾವಾರು ಅಂಕಗಳ ಆಧಾರದ ಮೇಲೆ ಸಿಬಿಎಸ್‌ಇ ಮೂಲಕ ಘೋಷಿಸಲಾಗುತ್ತದೆ. ಆದಾಗ್ಯೂ 'ರಾಜ್ಯ ಕೋಟಾದ' ಸೀಟುಗಳನ್ನು ಭರ್ತಿಮಾಡುವಾಗ, ಕನಿಷ್ಠ ಅರ್ಹತಾ ಮಾನದಂಡಗಳು ಸಾಮಾನ್ಯವಾಗಿದ್ದರೂ, ಆ ವಿದ್ಯಾರ್ಥಿಯು ಅವರ ಪ್ರವರ್ಗದ ಆಧಾರದ ಮೇಲೆ, ಅರ್ಜಿಯನ್ನು ಹಾಕಬಹುದು ಅಥವಾ ಪ್ರವೇಶದ ಉದ್ದೇಶಕ್ಕಾಗಿ ಇದು, ಪರಿಗಣಿಸಬಹುದಾದ ಪಾತ್ರವನ್ನು ನಿರ್ವಹಿಸುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಭ್ಯರ್ಥಿಯು, 'ಆಲ್ ಇಂಡಿಯಾ ಕೋಟಾ' ಅಥವಾ

'ರಾಜ್ಯ ಕೋಟಾದಲ್ಲಿ' ಅರ್ಜಿಸಲ್ಲಿಸಿದ್ದಲ್ಲಿ, ಸಾಮಾನ್ಯ ಪ್ರವರ್ಗ ಅಥವಾ ಮೀಸಲಿರಿಸಿದ ಪ್ರವರ್ಗಕ್ಕಾಗಿ ಕನಿಷ್ಠ ಶೇಕಡಾವಾರು ಅರ್ಹತಾ ಮಾನದಂಡಗಳು, ಸಾಮಾನ್ಯವರ್ಗದ ಮಟ್ಟಿಗೆ, ಸಂದರ್ಭಾನುಸಾರ ಶೇಕಡಾ 50 ಮತ್ತು ಶೇಕಡಾ 40 ಆಗಿರತಕ್ಕದ್ದು. ಆದರೆ, 'ಆಲ್ ಇಂಡಿಯಾ ಕೋಟಾ'ದ ಸೀಟಿಗಾಗಿ ಅಥವಾ 'ರಾಜ್ಯ ಕೋಟಾ'ದ ಸೀಟಿಗಾಗಿ ಯಾವುದಕ್ಕೆ ಆದರೂ ಸೀಟಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯ ಪರಿಗಣನೆಗಾಗಿ, ಸಂಬಂಧಪಟ್ಟ ಪ್ರವರ್ಗ ಎಂದರೆ, ಸಾಮಾನ್ಯ ಪ್ರವರ್ಗ ಅಥವಾ ಮೀಸಲಿರಿಸಿದ ಪ್ರವರ್ಗವಾಗಿರಲಿ ಕೆಲವೊಂದು ಜಾತಿ ಅಥವಾ ವರ್ಗವನ್ನು ಮಾತ್ರ, ಸಂಬಂಧಪಟ್ಟ 'ಆಲ್ ಇಂಡಿಯಾ ಕೋಟಾ'ದಷ್ಟರ ಮಟ್ಟಿಗೆ ಮೀಸಲಿರಿಸಿದ ಪ್ರವರ್ಗದಲ್ಲಿ ಪ್ರತ್ಯೇಕವಾಗಿ ಪರಿಗಣಿಸಬೇಕಾಗುವ ಅಗತ್ಯವಿದೆಯೆಂಬ ಸರಳಕಾರಣಕ್ಕಾಗಿ ಪ್ರತ್ಯೇಕವಾಗಿ ಪರಿಗಣಿಸುವುದು ಅಗತ್ಯವಾಗಿದ್ದು, ಮೀಸಲಾತಿ ಪ್ರಯೋಜನದ ಕ್ಲೇಮಿಗೆ 'ರಾಜ್ಯ ಕೋಟಾ' ಕ್ಲೇಮು ಮಾಡಲು ಇದು ಸಾಮಾನ್ಯವಾಗಿರುವುದಿಲ್ಲ, ಆದರೆ, ಸಂಬಂಧಪಟ್ಟ ರಾಜ್ಯದಲ್ಲಿ ಮೀಸಲಿರಿಸಿದ ಪ್ರವರ್ಗಕ್ಕಾಗಿ ಮಾಡಿದ ಘೋಷಣೆಯ ಪ್ರಕಾರ ಅದು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿರಬಹುದು.

6. ದಿನಾಂಕ 06.03.2017 ರಂದು ಪರಿಗಣನೆಗಾಗಿ ಈ ವಿಷಯವನ್ನು ಈ ನ್ಯಾಯಾಲಯು ತೆಗೆದುಕೊಂಡಿರುವಾಗ, ಈ ಮುಂದಿನ ಆದೇಶವನ್ನು ಮಾಡಲಾಗಿದೆಯೆಂಬುದನ್ನು ಸಹ ನಾವು ಮೊದಲಿಗೆ ದಾಖಲಿಸಿದ್ದೇವೆ:

> *"ಅರ್ಜಿದಾರಳ ಪರವಾಗಿ ಮಾನ್ಯ ನ್ಯಾಯವಾದಿ, ಶ್ರೀ ಅಜಯ್ ಕುಮಾರ್ ಪಾಟೀಲ್; 1ನೇ ಪ್ರತ್ಯರ್ಜಿದಾರನ ಪರವಾಗಿ ಕು. ನಿಲೋಫರ್ ಅಕ್ಬರ್, ಎಜಿಎ; 2ನೇ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿ, ಕು. ಪರ್ಹಾ ಫಾತಿಮಾ; 3ನೇ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಎನ್.ಕೆ. ರಮೇಶ್ ಮತ್ತು 4ನೇ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿ*

*ಶ್ರೀ ಅಭಿಷೇಕ್ ಮಾಲಿಪಾಟೀಲ್ ಇವರ ವಾದಗಳನ್ನು ನಾವು ಆಲಿಸಿದ್ದೇವೆ;*

*2. ಸಾಮಾನ್ಯ ಪ್ರವರ್ಗದ ಅರ್ಹತೆಯು, ಶೇಕಡಾ 50 ಅಗಿರತಕ್ಕದ್ದು ಮೀಸಲಾತಿ ಪ್ರವರ್ಗಕ್ಕೆ ಶೇಕಡಾ 40 ಆಗಿರತಕ್ಕದ್ದೆಂಬುದನ್ನು ಡೆಂಟಲ್ ಕೌನ್ಸಿಲ್ ವಿನಿಯಮವು ಉಪಬಂಧಿಸಿರುವ ಸ್ಥಿತಿಯು ವಿವಾದಿತವಲ್ಲ. ಆದಾಗ್ಯೂ, ನಮ್ಮ ಮೇಲ್ನೋಟದ ದೃಷ್ಟಿಯಲ್ಲಿ, ಅರ್ಹತೆಯನ್ನು ಪ್ರವರ್ಗಕ್ಕೆ ಎದುರುಬದುರಾಗಿ ಪರೀಕ್ಷಿಸಬಹುದಾಗಿದೆ ಎಂದರೆ, ಅಭ್ಯರ್ಥಿಯು, ಸಾಮಾನ್ಯ ಪ್ರವರ್ಗದಂತೆ, ಅರ್ಜಿಸಲ್ಲಿಸಿದ್ದಲ್ಲಿ, ಅವನು ಅಥವಾ ಆಕೆಯು, ಸಂದರ್ಭಾನುಸಾರ 'ಆಲ್ ಇಂಡಿಯಾ ಕೋಟಾ' ಅಥವಾ 'ರಾಜ್ಯ ಕೋಟಾ'ದಲ್ಲಿ ಶೇಕಡಾ 50 ಅಂಕಗಳನ್ನು ಪಡೆದಿರತಕ್ಕದ್ದು. ಆದರೆ, ಅಭ್ಯರ್ಥಿಯು, ಮೀಸಲು ಪ್ರವರ್ಗದಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ, ಅವನು ಅಥವಾ ಆಕೆಯು, 'ಆಲ್ ಇಂಡಿಯಾ ಕೋಟಾ' ಅಥವಾ 'ರಾಜ್ಯ ಕೋಟಾ'ದಲ್ಲಿ, ನೀಟ್ ಫಲಿತಾಂಶದಲ್ಲಿ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರತಕ್ಕದ್ದು. ಸಾಮಾನ್ಯ ಪ್ರವರ್ಗದ ವಿದ್ಯಾರ್ಥಿಯಂತೆ 'ಆಲ್ ಇಂಡಿಯಾ ಕೋಟಾ'ದಲ್ಲಿ ಅರ್ಜಿದಾರಳು, ಶೇಕಡಾ 50ರ ಮಾನದಂಡಗಳನ್ನು ಪೂರೈಸಿರುವುದಿಲ್ಲ, ಆದರೆ, ಆಕೆಯು ರಾಜ್ಯ ಕೋಟಾದಲ್ಲಿ, ಮೀಸಲು ಪ್ರವರ್ಗದಡಿಯಲ್ಲಿ ಬರುವುದರಿಂದ ಆಕೆ ಕನಿಷ್ಠ ಶೇಕಡಾ 40 ಅಂಕಗಳನ್ನು ಗಳಿಸಿರತಕ್ಕದ್ದು ಎಂಬ ಸ್ಥಿತಿಯು ವಿವಾದಿತವಲ್ಲ. ಆಕೆಯು, ಮೇಲಿನಂತೆ ಶೇಕಡಾ 40 ಎಂದರೆ 40,409287ನ್ನು ಈಗಾಗಲೇ ಪಡೆದುಕೊಂಡಿರುವುದರಿಂದ, ವಿಶ್ವವಿದ್ಯಾಲಯ ಅರ್ಹತೆಯನ್ನು ಕಡೆಗಣಿಸಿರುವುದು ಸ್ಪಷ್ಟವಾಗಿ ಕಾನೂನುಬಾಹಿರವಾಗಿರುವಂತೆ ಕಂಡುಬರುತ್ತದೆ.*

*3. ಹಾಗಾಗಿ, ಮಧ್ಯಕಾಲೀನ ಆದೇಶದ ಜಾರಿಯ ಮೂಲಕ ಮತ್ತು ಅರ್ಜಿದಾರಳಿಗೆ ಅರ್ಹತೆಯುನ್ನು ಕಡೆಗಣಿಸಿದ್ದಕ್ಕೆ ಸಂಬಂಧಪಟ್ಟಂತೆ ಅರ್ಜಿದಾರಳಷ್ಟರ ಮಟ್ಟಿಗೆ ಅನುಬಂಧ–'ಎಸ್'ನಲ್ಲಿ ವಿಶ್ವವಿದ್ಯಾಲಯದ ಮೂಲಕ ಮಾಡಲಾದ ತೀರ್ಮಾನದ ಅನುಷ್ಠಾನವನ್ನು ತಡೆಹಿಡಿಯಲಾಗಿದೆ ಮತ್ತು ಆಕೆಗೆ ಈಗಾಗಲೇ ನೀಡಿರುವ ಪ್ರವೇಶವನ್ನು ಮೀಸಲು ಪ್ರವರ್ಗದ ಮೇಲೆ ಅರ್ಹತೆಯುಳ್ಳವಳೆಂದು ಅರ್ಜಿದಾರಳನ್ನು ಪರಿಗಣಿಸತಕ್ಕದ್ದು.*

*4. ಮಧ್ಯಂತರ ಅರ್ಜಿ 1/2017ನ್ನು ತದನುಸಾರವಾಗಿ ವಿಲೇಮಾಡಲಾಗಿದೆ. 09.03.2017 ರಂದು ಮಂಡಿಸಿದೆ."*

7. ಅರ್ಜಿದಾರಳು, ಸಂಬಂಧ ಪಟ್ಟ 'ಆಲ್ ಇಂಡಿಯಾ ಕೋಟಾ'ದಷ್ಟರ ಮಟ್ಟಿಗೆ ಮೀಸಲಿರಿಸಿದ ಪ್ರವರ್ಗದಡಿ ಕ್ಲೇಮು ಮಾಡಲು ಹಕ್ಕುಳ್ಳವಳಾಗಿರುವುದಿಲ್ಲವೆಂಬ ಸ್ಥಿತಿಯು ವಿವಾದಿತವಲ್ಲ. ಆದ್ದರಿಂದ, ಅರ್ಜಿದಾರಳು 'ಆಲ್ ಇಂಡಿಯಾ ಕೋಟಾ'ದಲ್ಲಿ ಡೆಂಟಲ್ ಕೋರ್ಸ್‌ನ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಅರ್ಜಿದಾರಳು, ಅದರ ಶೇಕಡಾ 50ರ ಕನಿಷ್ಠ ಅರ್ಹತೆಯನ್ನು ಹೊಂದಿರಬೇಕಾಗುತ್ತದೆ, ಆದರೆ ಅದನ್ನು ಪಡೆದುಕೊಂಡಿರುವುದಿಲ್ಲ. ಆದಾಗ್ಯೂ, 'ರಾಜ್ಯ ಕೋಟಾ'ದ ಸೀಟುಗಳಷ್ಟರಮಟ್ಟಿಗೆ, ಸಂಬಂಧಪಟ್ಟ, ಅರ್ಜಿದಾರಳು, ಮೀಸಲಿರಿಸಿದ ಪ್ರವರ್ಗದಡಿ ಬರುವುದರಿಂದ ಮತ್ತು ಅರ್ಜಿದಾರಳು, ಸಂಬಂಧ ಪಟ್ಟ, 'ರಾಜ್ಯ ಕೋಟಾ' ಸೀಟುಗಳಷ್ಟರ ಮಟ್ಟಿಗೆ ಮೀಸಲಿರಿಸಿದ ಪ್ರವರ್ಗದಡಿ ಬರುವುದರಿಂದ ಅರ್ಜಿದಾರಳನ್ನು ಮೀಸಲಿರಿಸಿದ ಪ್ರವರ್ಗದಡಿ ಪ್ರವೇಶಕ್ಕಾಗಿ ಪರಿಗಣಿಸತಕ್ಕದ್ದು. ಅನ್ಯಥಾ ಸಾಮಾನ್ಯ ಪ್ರವರ್ಗದ ಶೇಕಡಾ 50ರಷ್ಟು ಅರ್ಹತೆಯು ಅನ್ವಯಿಸುವುದಿಲ್ಲವೆಂಬ ಕಾರಣದ ಮೇಲೆ ಮತ್ತು ಮೀಸಲಿರಿಸಿದ ಪ್ರವರ್ಗದ ಶೇಕಡಾ 40ರ ಅರ್ಹತೆಯು, ರಾಜ್ಯ ಕೋಟಾದ ಮೀಸಲಿರಿಸಿದ ಪ್ರವರ್ಗದ ಸೀಟುಗಳಿಗಾಗಿ ಅರ್ಹತಾ ಮಾನದಂಡಗಳನ್ನು ಪೂರೈಸುವ ಉದ್ದೇಶಕ್ಕಾಗಿ ಅನ್ವಯವಾಗುತ್ತದೆ.

8. ನೀಟ್ ಫಲಿತಾಂಶವನ್ನು, ಪುಟ 28ರಲ್ಲಿ ನೀಡಲಾಗಿದೆ ಮತ್ತು ಘೋಷಿತ ಫಲಿತಾಂಶದ ಪ್ರಕಾರ, ಅರ್ಜಿದಾರಳು ನೀಟ್ ಫಲಿತಾಂಶದಲ್ಲಿ ಶೇಕಡಾ 40.409287ನ್ನು ಪಡೆದುಕೊಂಡಿರುತ್ತಾಳೆ. ಅಂತೆಯೇ, ಮೀಸಲು ಪ್ರವರ್ಗಕ್ಕೆ ಅಗತ್ಯವಿರುವುದು ಸಹಾ ಶೇಕಡಾ 40 ಅಂಕಗಳು ಮಾತ್ರ. ಹಾಗಾಗಿ, ಅರ್ಜಿದಾರಳು, ಮೀಸಲಿರಿಸಿದ ಪ್ರವರ್ಗದಲ್ಲಿ ಅರ್ಹತಾ ಮಾನದಂಡಗಳನ್ನು ಪೂರೈಸಲು ಮೇಲಿನಂತೆ ಶೇಕಡಾ 40ರಷ್ಟು ಅಂಕಗಳನ್ನು ಪಡೆದುಕೊಂಡಿದ್ದಾಳೆ.

9. 3ನೇ ಪ್ರತ್ಯರ್ಜಿದಾರ-ವಿಶ್ವವಿದ್ಯಾಲಯ ಸಿಬಿಎಸ್ಇ ಪರೀಕ್ಷೆಯ ಫಲಿತಾಂಶದ ಮೂಲಕ ತಪ್ಪಾಗಿ ಮಾರ್ಗದರ್ಶನ ನೀಡಿದ್ದು, ನೀಟ್-2016ರಲ್ಲಿ 'ಅರ್ಹರಾಗಿಲ್ಲ'ವೆಂದು ನಮೂದಿಸಿರುವುದು ಕಂಡುಬರುತ್ತದೆ. ಅರ್ಜಿದಾರಳ ಪ್ರಕರಣದಲ್ಲಿ, 'ಆಲ್ ಇಂಡಿಯಾ ಕೋಟಾದ' ಮೇಲೆ ಪರಿಗಣಿಸಿದರೆ, 'ಆಲ್ ಇಂಡಿಯಾ ಕೋಟಾ' ದಲ್ಲಿರುವುದರಿಂದ, ಅರ್ಜಿದಾರಳು ಸಾಮಾನ್ಯ ಪ್ರವರ್ಗದಲ್ಲಿ ಅರ್ಜಿಸಲ್ಲಿಸಲು ಹಕ್ಕುಳ್ಳವಳಾಗಿರುತ್ತಾಳೆ ಮತ್ತು ಮೀಸಲಿರಿಸಿದ ಪ್ರವರ್ಗದಲ್ಲಿ ಅಲ್ಲ, ನೀಟ್-2016 ರಲ್ಲಿ ಅರ್ಜಿದಾರಳು ಅರ್ಹಳಲ್ಲವೆಂದು ಯಾರೇ ಹೇಳಬಹುದು ಆದರೆ, ಅದು, 'ಆಲ್ ಇಂಡಿಯಾ ಕೋಟಾ'ದ ಸೀಟುಗಳಿಗಾಗಿ ಮಾತ್ರವಾಗಿರುತ್ತದೆ. ಆದಾಗ್ಯೂ, ಈ ಮುಂಚೆ ಅಭಿಪ್ರಾಯಪಟ್ಟಿರುವಂತೆ, ಒಬ್ಬ ಮೀಸಲಿರಿಸಿದ ಪ್ರವರ್ಗದ ಅಭ್ಯರ್ಥಿಯೆಂದು ಅರ್ಹತೆಯನ್ನು ಪರಿಗಣಿಸುವಾಗ ಕನಿಷ್ಠ ಶೇಕಡ 40 ಅಂಕಗಳನ್ನು ಅಗತ್ಯಪಡಿಸಿದೆ. ಅರ್ಜಿದಾರಳು, ಸಂಬಂಧಿಸಿದ 'ರಾಜ್ಯ ಕೋಟಾ' ಸೀಟುಗಳಷ್ಟರ ಮಟ್ಟಿಗೆ ಮೀಸಲಿರಿಸಿದ ಪ್ರವರ್ಗದಡಿ ಬರುವುದರಿಂದ ಸಾಮಾನ್ಯ ಪ್ರವರ್ಗದ ಅಭ್ಯರ್ಥಿಯ ಅರ್ಹತಾ ಮಾನದಂಡಗಳನ್ನು ಪೂರೈಸುವ ಅಗತ್ಯವು ಅನ್ವಯಿಸುವುದಿಲ್ಲ, ಆದರೆ ಮೀಸಲಿರಿಸಿದ ಪ್ರವರ್ಗದ ಅಭ್ಯರ್ಥಿಗಾಗಿನ ಅಗತ್ಯವು, ಶೇಕಡಾ 40 ಆಗಿದ್ದು, ಇದು ಅನ್ವಯಿಸುತ್ತದೆ ಮತ್ತು ಅರ್ಜಿದಾರಳು ಈಗಾಗಲೇ ಶೇಕಡಾ 40ರಷ್ಟು ಅಂಕಗಳನ್ನು ಪಡೆದುಕೊಂಡಿದ್ದಾಳೆಂಬುದು ವಿವಾದಿತವಲ್ಲ.

10. ಈ ಸನ್ನಿವೇಶಗಳಲ್ಲಿ ವಿಶ್ವವಿದ್ಯಾಲಯ ದಿನಾಂಕ 08.02.2017ರ ಮೂಲಕ ಅರ್ಜಿದಾರಳ ಅನುಮೋದನೆಯನ್ನು ಅಲ್ಲಗಳೆದಿರುವ ವಿಶ್ವವಿದ್ಯಾಲಯದ

ತೀರ್ಮಾನವನ್ನು, ಸಮರ್ಥಿಸಿಕೊಳ್ಳಲಾಗದು. ಹಾಗೆಯೇ, ವಿಶ್ವವಿದ್ಯಾಲಯ, ಇತರೇ ಅಭ್ಯರ್ಥಿಗಳಿಗಾಗಿ ಸಹ ಅದೇ ಮಾನದಂಡಗಳು ಅನ್ವಯಿಸಿರಬಹುದು, ಆದರೆ ಪ್ರಸ್ತುತ ಅರ್ಜಿಯಲ್ಲಿರುವ ವಸ್ತುವಿಷಯಕ್ಕೊಳಪಡದೇ ಇರುವುದರಿಂದ ಸದರಿ ಅಂಶಗಳ ಮೇಲೆ ಮುಂದುವರೆದು ಯಾವುದೇ ಅಭಿಪ್ರಾಯವನ್ನು ನಾವು ವ್ಯಕ್ತಪಡಿಸುವ ಅಗತ್ಯವಿರುವುದಿಲ್ಲ. ಯಾವುದೇ ಕಾರಣಕ್ಕೂ ಅರ್ಜಿದಾರಳ ಪ್ರವೇಶಕ್ಕೆ ಅನುಮೋದನೆಯನ್ನು ಅಲ್ಲಗಳೆದ ವಿಶ್ವವಿದ್ಯಾಲಯದ ತೀರ್ಮಾನವನ್ನು ಸಮರ್ಥಿಸಿಕೊಳ್ಳಲಾಗದು. ಹಾಗಾಗಿ, ಅದನ್ನು ರದ್ದುಪಡಿಸಲಾಗಿದೆ. ಪರಿಣಾಮವಾಗಿ, ವಿಶ್ವವಿದ್ಯಾಲಯದಿಂದ ಅರ್ಜಿದಾರಳಿಗೆ ಪ್ರವೇಶಕ್ಕಾಗಿ ಅನುಮೋದನೆ ನೀಡತಕ್ಕದ್ದು.

ಅರ್ಜಿಯನ್ನು, ಅದಕ್ಕನುಸಾರವಾಗಿ ಪುರಸ್ಕರಿಸಲಾಗಿದೆ. ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.

---